*ಡಾ॥ ಆರ್. ನಾಗನಗೌಡ.—ಕೆಲವು ದಿನಗಳ ಹಿಂದೆ ಈ ವಿಚಾರದಲ್ಲಿ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಸಾಲವಾಗಿ ಎಷ್ಟು ಕೊಟ್ಟಿದ್ದಾರೆ?

ಡಾ॥ ಆರ್. ನಾಗನಗೌಡ.—ಏನೂ ಹಣವನ್ನು ಕೊಟ್ಟಿಲ್ಲವೆಂದು ಅದರಲ್ಲಿ ಹೇಳಿದ್ದೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅದನ್ನು ತೆಗೆದು ಕೊಳ್ಳಲು ಪತ್ರವ್ಯವಹಾರ ನಡೆಯುತ್ತಿದೆಯೆಂದು ಹೇಳಿದ್ದೀರಿ, ಇನ್ನೂ ಪೂರ್ತಿಯಾಗಿಲ್ಲವೆ?

ಡಾ॥ ಆರ್. ನಾಗನಗೌಡ.—ಇನ್ನೂ ಆಗಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರಿನ ಸುತ್ತ ಮುತ್ತಲೂ ಹೊಸದಾಗಿ ವಿದ್ಯುಚ್ಛಕ್ತಿ ಕೊಡಬೇಕೆಂದರೆ ಇಲ್ಲವೆಂದು ಹೇಳುತ್ತಿದ್ದೀರಿ; ಹೆಚ್ಚು ವಿದ್ಯುಚ್ಛಕ್ತಿ ಉತ್ಪತ್ತಿಮಾಡಲು ಏನು ಏರ್ಪಾಡು ಮಾಡಿದ್ದೀರಿ?

ಡಾ॥ ಆರ್. ನಾಗನಗೌಡ.—ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಬೆಂಗಳೂರಿನ ಸುತ್ತ ಮುತ್ತ ಕೊಡಲು ಏನು ಕಾರ್ಯಕ್ರಮ ಜರುಗಿದೆ?

ಡಾ॥ ಆರ್. ನಾಗನಗೌಡ.—ಮುಖ್ಯವಾಗಿ ಭದ್ರಾವತಿಯಿಂದ ಬೆಂಗಳೂರಿಗೆ ಒಂದು ಹೊಸ ಲೈನ್ ತರಬೇಕೆಂದು ಮಾಡಿದ್ದೇವೆ. ತಮಗೆ ಗೊತ್ತಿರುವಹಾಗೆ ಹೊನ್ನೆಮರಡು ಯೋಜನೆಯನ್ನು ಪ್ರಾರಂಭ ಮಾಡಬೇಕೆಂದಿದ್ದೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಭದ್ರಾವತಿ ಲೈನನ್ನು ಎಳೆಯುವುದಕ್ಕೆ ಎಷ್ಟು ಖರ್ಚಾಗುತ್ತದೆ? ಎಷ್ಟು ದಿವಸಗಳಾಗುತ್ತವೆ?

ಡಾ॥ ಆರ್. ನಾಗನಗೌಡ.—90 ಲಕ್ಷ ರೂಪಾಯಿ ಖರ್ಚಾಗಬಹುದು. ಸುಮಾರು ಒಂದು ವರ್ಷಕ್ಕೆ ಮೇಲ್ಪಟ್ಟು ಆಗಬಹುದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಮಹಾತ್ಮಾ ಗಾಂಧಿ ಹೈಡ್ರೊ ಎಲೆಕ್ಟ್ರಿಕ್ ಸ್ಕೀಮ್ sanction ಆಗಿದೆಯೇ?

ಡಾ॥ ಆರ್. ನಾಗನಗೌಡ.—ಮಹಾತ್ಮಾ ಗಾಂಧಿ ಎಲೆಕ್ಟ್ರಿಕ್ ಸ್ಕೀಮ್ ಕೆಲಸ ಮುಗಿದೇ ಇದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹೊನ್ನೇಮರಡು ಸ್ಕೀಮ್ sanction ಆಗಿದೆಯೇ?

ಡಾ॥ ಆರ್. ನಾಗನಗೌಡ.—ಅದು ಇನ್ನೂ finalise ಆಗಿಲ್ಲ. Surveys ಮುಂತಾದುವು ಮುಗಿದಿವೆ. ಅವನ್ನು ಇಂಡಿಯಾ ಸರ್ಕಾರಕ್ಕೆ ಕಳುಹಿಸಿಕೊಟ್ಟಿದೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಹೊನ್ನೇಮರಡು ಕೆಲಸವೆಲ್ಲಾ ಪೂರೈಸಬೇಕಾದರೆ ಎಷ್ಟು ವರುಷಗಳು ಆಗುತ್ತವೆ?

ಡಾ॥ ಆರ್. ನಾಗನಗೌಡ.—ಹೊನ್ನೇಮರಡು ಕೆಲಸವೆಲ್ಲಾ ಪೂರೈಸಬೇಕಾದರೆ 5-6 ವರ್ಷಗಳು ಬೇಕಾಗುತ್ತವೆ. Negotiations ನಡೆಯುತ್ತಿವೆ. ಇಂಡಿಯಾ ಸರ್ಕಾರದವರಿಂದ communications ಕೇವಲ ಇನ್ನು ಕೆಲವು ವಾರಗಳಲ್ಲಿ ಬಗೆಹರಿಯಬಹುದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ ಬೆಂಗಳೂರು ಸುತ್ತಮುತ್ತಲೂ ಹೊಸ ಕರೆಂಟನ್ನು ಕೊಡಬೇಕಾದರೆ ನಮಗೆ ತೊಂದರೆ ಇದೆ, ಇನ್ನೂ 7-8 ತಿಂಗಳುಗಳು ಆಗುವುದಿಲ್ಲವೆಂದು ಹೇಳುತ್ತೀರಿ. ಹೊಸಲೈನ್ ಮಾಡಬೇಕೆಂದು ಇರುವುದು ಯಾವಾಗ?

ಡಾ॥ ಆರ್. ನಾಗನಗೌಡ.—ಕರೆಂಟನ್ನು ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಿ ಕೊಟ್ಟಿದ್ದೇವೆ. 7-8 ತಿಂಗಳು ಬೇಕೆಂದು ಹೇಳಲಿಲ್ಲ. ಭದ್ರಾವತಿ ಲೈನ್ ಬರುವುದಕ್ಕೆ ಕನಿಷ್ಠ ಪಕ್ಷ ಸುಮಾರು ಒಂದು ವರ್ಷ ಮೇಲ್ಪಟ್ಟು ಆಗ ಬಹುದು. ಸಣ್ಣ ಪ್ರಮಾಣದಲ್ಲಿ ಕರೆಂಟನ್ನು ಕೊಟ್ಟಿದ್ದೇವೆ. ಇನ್ನು ಎರಡು ತಿಂಗಳಲ್ಲಿ ಸಾಧ್ಯವಾಗಬಹುದು.

ಶ್ರೀ ಎ. ವಿ. ನರಸಿಂಹರೆಡ್ಡಿ.—ಸರ್ಕಾರದವರಿಗೆ ಇಲಾಖೆಯವರು ಈರೀತಿ electricity storage ಆಗಿರುವುದನ್ನು ವರದಿಮಾಡಿದ್ದಾರೆಯೆ?

ಡಾ॥ ಆರ್. ನಾಗನಗೌಡ.—ವರದಿ ಮಾಡಿದ್ದಾರೆ, ಅದಕ್ಕೆ ನಿವಾರಣೆ ಮಾಡಬೇಕಾದ proposalನ್ನು ಕಳುಹಿಸಿದ್ದೇವೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ನಿವಾರಣೆ ಮಾಡಬೇಕಾದ proposals ಗಳಿಗೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಬಹಳ ದಿವಸ ಕಾಲಾವಧಿ ಬೇಕಾಗುವುದಿಲ್ಲವೆ?

ಡಾ॥ ಆರ್. ನಾಗನಗೌಡ.—ಆದುದರಿಂದಲೇ ಒಂದು ಪ್ರಮಾಣದಲ್ಲಿ ಎಲ್ಲರಿಗೂ electricity ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲದೆ ಜನಗಳು programme ನಲ್ಲಿರುವುದಕ್ಕಿಂತಲೂ ಹೆಚ್ಚಾಗಿ ಹೆಚ್ಚು ಪ್ರಮಾಣದಲ್ಲಿ electricity ಉಪಯೋಗಿಸುವುದಕ್ಕೆ ಪ್ರಾರಂಭಮಾಡಿದ್ದಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಯಾವಯಾವ ಪ್ರಮಾಣದಲ್ಲಿ electricity ಯನ್ನು ಜನಗಳು ತೆಗೆದುಕೊಳ್ಳುತ್ತಿದ್ದಾರೋ ಅದೇ ಪ್ರಮಾಣದಲ್ಲಿ ಅವರಿಗೆ electricity ಯನ್ನು ಕೊಡುತ್ತಾ ಹೋದರೆ ನಿವ್ಮಲ್ಲಿರುವ electricity stock ಮುಗಿದು ಹೋಗುತ್ತದೆ ಎಂಬುದನ್ನು ತಕ್ಕಷ್ಟು ವೇಗದಲ್ಲಿ ಆಲೋಚನೆ ಮಾಡಿಲ್ಲವೆಂದು ಕಾಣುತ್ತದೆ?

ಡಾ॥ ಆರ್. ನಾಗನಗೌಡ.—ಹಾಗೇನೂ ಇಲ್ಲ.

ಶ್ರೀ ಎಸ್. ಸಿದ್ದಪ್ಪ.—ವಿದ್ಯುಚ್ಛಕ್ತಿ ಜೋಗ ಜಲಪಾತದಲ್ಲಿ ಕಡಮೆಯಾಗಿರುವುದರಿಂದ ಜನರ ಬೇಡಿಕೆಗಳನ್ನು ನೆರವೇರಿಸುವುದಕ್ಕೆ ಆಗುತ್ತಿಲ್ಲ ತಾನೇ?

ಡಾ॥ ಆರ್. ನಾಗನಗೌಡ.—ವಿದ್ಯುಚ್ಛಕ್ತಿ ಕಡಮೆ ಆಗುವುದಿಲ್ಲ. ಎಷ್ಟು ಉತ್ಪತ್ತಿ ಆಗಬಹುದೋ ಅಷ್ಟು ಆಗುತ್ತಿದೆ, ಮತ್ತು ಹೆಚ್ಚಿನ ಪ್ರಮಾಣದಲ್ಲಿ ಅದನ್ನು ಜನಗಳಿಗೆ ಕೊಡುತ್ತಲೂ ಇದ್ದೇವೆ.

ಶ್ರೀ ಎಸ್. ಸಿದ್ದಪ್ಪ.—ಈ ಕಾರಣದಿಂದಲೇ ಹೊನ್ನೇಮರಡು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಾ ಇರುವುದಲ್ಲವೇ?

ಡಾ॥ ಆರ್. ನಾಗನಗೌಡ.—ಹೊನ್ನೇಮರಡು ಸ್ಕೀಮನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಲಿದ್ದೇವೆ. ಅದನ್ನು ತೆಗೆದುಕೊಳ್ಳುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ಮಾಡಬೇಕೋ ಅವೆಲ್ಲವನ್ನೂ ಮಾಡುತ್ತಲಿದ್ದೇವೆ.

Electric Department (Revenue and Expenditure).

Q.—185. Sri V. M. MASCARENHAS (St. John's Hill).—

Will the Government be pleased to state :—

(*a*) the working expenses of the Electrical Department from the year 1947, yearwar;

(*b*) the revenue from the Department during the same years ?

A.—Dr. R. NAGAN GOWDA (Minister for Agriculture).—

(*a*)—

Year	Working Expenses (including contribution to Depreciation Fund)
	Rs.
1946-47 ...	43,92,561
1947-48 ...	53,77,707
1948-49 ...	68,67,892
1949-50 ... (9 months only)	60,69,561
1950-51 ...	86,76,956
1951-52 ...	96,40,072
1952-53 ...	1,27,35,876
1953-54 ...	1,46,16,406

(*b*)—

Year	Gross Receipts Rs.
1946-47 ...	1,18,32,559
1947-48 ...	1,22,15,794
1948-49 ...	1,37,43,032
1949-50 ... (9 months only)	1,09,83,255
1950-51 ...	1,60,94,063
1951-52 ...	1,96,23,604
1952-53 ...	2,17,08,679
1953-54 ...	2,34,15,097

Sri V. M. MASCARENHAS.—Will the Hon'ble Minister be pleased to inform me as to what is the reason for this alarming increase in the working expenses ?

Dr. R. NAGAN GOWDA.—There is nothing alarming about it. On the other hand, our income is also going up. A large number of developmental works have been taken up. It is therefore nothing unusual.

Sri V. M. MASCARENHAS.—Expenditure under development work comes under capital expenditure. The expenditure for this Department has gone up for the last two years. On account of surcharge of 20 per cent your revenue has gone up; if you do not include surcharge, your revenue would be Rs. 190 lakhs but your expenses have gone up so high. I therefore want to know the reason for that.

Dr. R. NAGAN GOWDA.—I agree that the expenditure under development works would come under capital. But for maintaining these extensions of lines, we need more staff and that is why the expenditure has gone up.

Sri V. M. MASCARENHAS.—I am convinced that there is something wrong somewhere. It is high time that this question should be looked into.

Dr. R. NAGAN GOWDA.—I do not believe there is anything wrong. But if the Hon'ble Member would make some specific suggestions, they will all be considered and examined.

ಶ್ರೀ ಎಸ್. ಗೋಪಾಲಗೌಡ.—1953-54 ನೇ ಇಸವಿಯಲ್ಲಿ Depreciation ಫಂಡಿಗೆ ಎಷ್ಟು ಹಣವನ್ನು ತೆಗೆದು ಇಟ್ಟಿದ್ದಾರೆ?

Dr. R. NAGAN GOWDA.—It is in the Budget Estimates for 1954-55. If the Hon'ble Member has got it, he will find it on page 41.

ಶ್ರೀ ಎಸ್. ಗೋಪಾಲಗೌಡ.—ನಾನು ಕೇಳುವುದು 1953-54 ನೇ ಇಸವಿಯಲ್ಲಿ ಎಷ್ಟು ಹಣವನ್ನು ತೆಗೆದು ಇಟ್ಟಿದ್ದಾರೆ ?

Dr. R. NAGAN GOWDA.—Sir, for the benefit of the Hon'ble Member, I may say that provision for transfer to Depreciation Fund is noted as Rs. 64,75,500.

ಶ್ರೀ ಎಸ್. ಗೋಪಾಲಗೌಡ.—ಎರಡು ವರ್ಷಕ್ಕೂ ಒಟ್ಟಿನಲ್ಲಿ ಇಷ್ಟು ಹಣವೇ ?

Dr. R. NAGAN GOWDA.—No. 1953-54 is taken as one year.

Sri S. GOPALA GOWDA.—I want to know the figures for 1953 and 1954.

Dr. R. NAGAN GOWDA.—The revised estimate for 1953-54 is Rs. 57 lakhs and for 1952-53 is Rs. 52 lakhs.

Sri S. GOPALA GOWDA.—Will the Government be pleased to state the total amount of capital outlay hitherto ?

Dr. R. NAGAN GOWDA.—I think I will have to say from my memory. It is in the neighbourhood of Rs. 28 crores.

Sri S. GOPALA GOWDA.—What is the rate of interest that is being calculated on the capital outlay ?

Dr. R. NAGAN GOWDA.—I have not got figures for that. Anyhow, we have been paying interest for the moneys that have been borrowed from the Government of India for this purpose and some moneys also have been utilised from the revenues of the

Government of Mysore for many years.

ಶ್ರೀ ವಿ. ವೆಂಕಟಪ್ಪ.—Electricity ಉತ್ಪತ್ತಿಗೂ ಮತ್ತು ಅದನ್ನು ಉತ್ಪತ್ತಿ ಮಾಡುವ ಖರ್ಚಿಗೂ 1946-47 ರಲ್ಲಿ ಇರುವುದಕ್ಕಿಂತ ಈಗ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಡಾ॥ ಆರ್. ನಾಗನಗೌಡ.—1946-47 ರಲ್ಲಿ Jog Electric Works ಇರಲಿಲ್ಲ. ಇತ್ತೀಚೆಗೆ Jog Electric Works ಬಂದಿವೆ. Supply lines ಬಹಳವಾಗಿವೆ. Therefore the expenditure on staff, etc., has increased.

ಶ್ರೀ ವಿ. ವೆಂಕಟಪ್ಪ.—ಖರ್ಚಿಗೆ ತಕ್ಕಷ್ಟು ಉತ್ಪತ್ತಿ ಹೆಚ್ಚಾಗಬೇಕಲ್ಲವೇ?

ಡಾ॥ ಆರ್. ನಾಗನಗೌಡ.—ಉತ್ಪತ್ತಿ ಅಷ್ಟು ಶೀಘ್ರವಾಗಿ ಹೆಚ್ಚಾಗುವುದಿಲ್ಲ. ನಾವು ಒಂದು ಲೈಕ್ ಎಳೆದರೆ ಅದಕ್ಕೆ ಕನಿಷ್ಠ ಪಕ್ಷ ಬೇಕಾಗಿರುವ Irrigation pump sets ಮತ್ತು Lathes ಅಲ್ಲಿರುವುದಿಲ್ಲ. ಆದ್ದರಿಂದ ಕ್ರಮೇಣ ಅವುಗಳ ಉಪಯೋಗ ಜಾಸ್ತಿಯಾದ ಹಾಗೆಲ್ಲ ಅದರಿಂದ ಬರತಕ್ಕ ಉತ್ಪತ್ತಿಯೂ ಜಾಸ್ತಿಯಾಗುತ್ತದೆ.

Mr. SPEAKER.—What I have understood is that the income is not proportionate because though the works have been completed, the full quantity of electricity is not supplied to the villages. Therefore, they are not realising the full income.

Sri V. VENKATAPPA.—Is not all the power that is generated used?

Dr. R. NAGAN GOWDA.—No, all the power is not used.

Sri V. VENKATAPPA.—Is there any surplus?

Dr. R. NAGAN GOWDA.—I believe it is in the neighbourhood of 20,000 kilowatts.

9-30 A.M.

Sri V. VENKATAPPA.—Has not the power generated been utilised all these years?

Dr. R. NAGAN GOWDA.—All is not being used.

Sri V. VENKATAPPA.—How much of the power is being utilised?

Dr. R NAGAN GOWDA.—It is about in the neighbourhood of 20,000 K.Ws.

Sri R. CHENN GARAMIAH.—Just now the Hon'ble Minister was pleased to say that in the year 1947, the Jog Hydro-Electric Works were not taken up. Will the Hon'ble Minister be pleased to state when the Jog Works were completed?

Dr. R. NAGAN GOWDA.—I may state, in 1946-47 the development of current had not taken place. It is only after the work was completed, the generating of power began.

Sri R. CHENNIGARAMIAH.—The second stage of the Jog Hydro Electric Works began between 1947-52 and it was completed. That means to say that there must have been power available during that period.

(No answer.)

ಶ್ರೀ ಆರ್. ಕೆ. ಪ್ರಸಾದ್.—Code of Rules ನ್ನು waive ಮಾಡಿ ಸರ್ಕಾರದವರು uneconomic ಲೈನುಗಳನ್ನೇನಾದರೂ ಎಳೆಯುವುದಕ್ಕೆ ಅವಕಾಶ ಕೊಟ್ಟಿದ್ದೀರಾ?

ಡಾ॥ ಆರ್. ನಾಗನಗೌಡ.—ನೋಟೀಸ್.

Electric Power (Supply to I. P. sets in Jayachamarajapura)

Q.—565. Sri C. H. LINGADEVARU (Chiknaikanahalli).—

Will the Government be pleased to state :—

(*a*) whether the raiyats of Jayachamarajapura in Chiknaikanahalli Taluk have not requested for the supply of power to the I. P. sets and also deposited the required amount;

(*b*) whether an estimate has been prepared in this behalf;

(*c*) when the said work would be undertaken?

A.—Dr. R. NAGAN GOWDA (Minister for Agriculture).—

(*a*) Yes.

(*b*) Yes.

(*c*) The estimate has been sanctioned and the work will be taken up as soon as the parties get ready with their pumping sets, etc.

ಶ್ರೀ ಸಿ. ಎಚ್. ಲಿಂಗದೇವರು.—ಇದರ ಎಸ್ಟಿಮೇಟು ಮಂಜೂರಾದುದು ಯಾವಾಗ?

Dr. R. NAGAN GOWDA.—The estimate has already been sanctioned in January 1955.

ಶ್ರೀ ಸಿ. ಎಚ್. ಲಿಂಗದೇವರು.—ಮಂಜೂರಾಗಿ ಎಷ್ಟು ದಿವಸವಾಯಿತು?

Dr. R. NAGAN GOWDA.—As I said it is going to be taken up as soon as the pumping set is received.

ಶ್ರೀ ಸಿ. ಎಚ್. ಲಿಂಗದೇವರು.—ಅವರಿಗೇನಾದರೂ ಬೇಗ I. P. ಸೆಟ್ಟುಗಳನ್ನು ಹಾಕಿಸಿಕೊಳ್ಳಬೇಕೆಂದು ಹೇಳಿ ತಿಳಿವಳಿಕೆ ಕೊಟ್ಟಿದ್ದೀರಾ?